ಬೆಂಕಿ ಅಪಘಾತದಿಂದ ಆಸ್ತಿ ಸ್ವತ್ತಿನ ದುರ್ಘಟನೆಗಳ ಕುರಿತು

೧೩೩೩ (೧೯೧೨) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ, ಹಾಗೂ ಯೋಜನಾ ಮತ್ತು ಭಾರಿ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧–೧–೮೭ ರಿಂದ ೩೧–೪–೮೮ರ ವರೆಗೆ ನಡೆದಿರುವ ಬೆಂಕಿ ದುರ್ಘಟನೆಗಳು ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಆಕಸ್ಮಿಕಗಳಲ್ಲಿ ನಷ್ಟವಾಗಿರುವ ಸ್ವತ್ತಿನ ಅಂದಾಜು ಮೌಲ್ಯ ಎಷ್ಟು ?

ಇ) ಈ ಆಕಸ್ಮಿಕಗಳಲ್ಲಿ ಪರಿಹಾರದ ವಿಲೇವಾರಿ ಮಾಡಲಾಗಿರುವ ಪ್ರಕರಣಗಳು ಎಷ್ಟು ?

ಈ) ಕುಂದಾಪುರ ತಾಲ್ಲೂಕಿಗೆ ಅಗ್ನಿ ಶಾಮಕ ಕೇಂದ್ರವನ್ನು ಶೀಘ್ರವಾಗಿ ಮಂಜೂರು ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ದಿನಾಂಕ ೧–೧–೮೭ ರಿಂದ ೩೧–೪–೮೮ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟಾದ ಅಗ್ನಿ ಅನಾಹುತಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ಸಂಖ್ಯೆ
ಮಂಗಳೂರು	೪೨
ಬಂಟ್ವಾಳ	೫೯
ಪುತ್ತೂರು	೫೮
ಸೂಳ್ಯ	೪೮
ಬೆಳ್ತಂಗಡಿ	೭೬
ಕಾರ್ಕಳ	೬೭
ಉಡುಪಿ	೫೪
ಕುಂದಾಪುರ	೧೩೮
	———
	೫೪೨

ಆ) ಈ ಆಕಸ್ಮಿಕಗಳಲ್ಲಿ ನಷ್ಟವಾದ ಸ್ವತ್ತಿನ ಅಂದಾಜು ಮೌಲ್ಯ ರೂ. ೨೮,೨೫,೨೬೭–೦೦

ಇ) ಈ ಆಕಸ್ಮಿಕಗಳಲ್ಲಿ ನೊಂದ ಸಂತ್ರಸ್ತರ ಪೈಕಿ ೪೬೮ ಕುಟುಂಬಗಳಿಗೆ ಪರಿಹಾರ ನೀಡಿದೆ.

ಈ) ಇಲ್ಲ.

ಚಿತ್ತಾಪುರ ತಾಲ್ಲೂಕು ಕಾಳಗಿಯನ್ನು ಹೊಸ ತಾಲ್ಲೂಕಾಗಿ ರಚನೆ ಮಾಡುವುದು

೧೩೩೪ (೨೬೧೧) ಶ್ರೀ ವಿಶ್ವನಾಥ ಪಾಟೀಲ ಹೆಬ್ಬಾಳ್ (ಚಿತ್ತಾಪುರ).—ಮಾನ್ಯ ಕಂದಾಯ ಯೋಜನಾ ಮತ್ತು ಭಾರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಆಡಳಿತಾತ್ಮಕ ದೃಷ್ಟಿಯಿಂದ ಮತ್ತು ೧೦೦, ೧೧೦ ಕಿ.ಮೀ. ದೂರದಿಂದ ತಾಲ್ಲೂಕು ಸ್ಥಳವಾದ ಚಿತ್ತಾಪುರಕ್ಕೆ ಹೋಗುವ ತೊಂದರೆಯನ್ನು ತಪ್ಪಿಸುವ ದೃಷ್ಟಿಯಿಂದ ಚಿತ್ತಾಪುರ ತಾಲ್ಲೂಕನ್ನು ವಿಂಗಡಿಸಿ ಕಾಳಗಿಯನ್ನು ಕೇಂದ್ರವಾಗಿಟ್ಟುಕೊಂಡು ಹೊಸದಾಗಿ ಕಾಳಗಿ ತಾಲ್ಲೂಕನ್ನು ರಚಿಸಲು ವಾಸುದೇವರಾವ್ ಸಮಿತಿ, ಹುಂಡೇಕರ್ ಸಮಿತಿ ಹಾಗೂ ಗದ್ದಿಗೌಡರ ಸಮಿತಿ ಈ ಗಾಗಲೇ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಕಾಳಗಿಯನ್ನು ತಾಲ್ಲೂಕು ಸ್ಥಳವಾಗಿ ಎಷ್ಟು ದಿವಸಗಳಲ್ಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಜಿಲ್ಲಾ ಪುನರ್ ವಿಂಗಡಣಾ ಸಮಿತಿಯ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದ್ದು ಸೂಕ್ತ ಕಾಲದಲ್ಲಿ ಇವುಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ನಾಡ ಕಛೇರಿಗಳನ್ನು ಪ್ರಾರಂಭಿಸುವುದು

೧೩೩೩ (೨೫೯೩) ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತಾಪುರ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹೊಸ ನಾಡ ಕಛೇರಿಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಚಿತಾಪುರ ತಾಲ್ಲೂಕು, ದೊಡ್ಡ ತಾಲ್ಲೂಕು ಆಗಿರುವುದರಿಂದ ಗುಂದಗರ್ತಿ ಹಾಗೂ ನಾಲವಾರ ಕಂದಾಯ ವೃತ್ತಗಳನ್ನು ನಾಡ ಕಛೇರಿಯಾಗಿ ಪರಿವರ್ತಿಸಲು ಸರ್ಕಾರದವರು ಯಾವಾಗ ಕ್ರಮ ಕೈಗೊಳ್ಳುವರು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಗಮನದಲ್ಲಿದೆ.

ಆ) ಒಂದು ಬಾರಿಗೆ ತಾಲ್ಲೂಕಿನ ಒಂದು ಹೋಬಳಿಯಲ್ಲಿ (ಕಸಬಾ ಹೋಬಳಿ ಹೊರತುಪಡಿಸಿ) ಮಾತ್ರ ನಾಡಕಛೇರಿ ಪ್ರಾರಂಭಿಸುವುದು ಸರ್ಕಾರದ ಕಾರ್ಯನೀತಿಯಾಗಿರುವುದರಿಂದ ಚಿತ್ತಾಪುರ ತಾಲ್ಲೂಕಿನ ಏರಡು ಹೋಬಳಿಗಳಲ್ಲಿ ನಾಡ ಕಛೇರಿ ಪ್ರಾರಂಭಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಕುಮ್ಕಿ ಸ್ಥಳದ ಬಗ್ಗೆ

೧೩೩೬ (೨೧೫೯) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ, ಯೋಜನಾ ಮತ್ತು ಭಾರಿ, ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಕೃಷಿ ಮಾಡುವ ಗದ್ದೆಗಳ ಪಡದಲ್ಲಿರುವ ಕುಮ್ಕಿ ಸ್ಥಳವು ಸದರಿ ರೈತರಿಗೆ ದೊರೆಯದಿದ್ದಲ್ಲಿ ಅವುಗಳನ್ನು ಕೃಷಿ ಮಾಡಲು ಅಸಾಧ್ಯವೆಂಬ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಕುಮ್ಕಿ ಸ್ಥಳಗಳನ್ನು ಅನೇಕ ಕೃಷಿ ಕೂಲಿ ಕಾರ್ಮಿಕರು ಮನೆ ಕಟ್ಟಿಕೊಂಡು ಹೇರಳ ಕೃಷಿ ಮಾಡಿಕೊಂಡು ಜೀವಿಸುತ್ತಿದ್ದಾರೆ. ಇಂತಹ ಸ್ಥಳಗಳನ್ನು ಸಂಬಂಧಪಟ್ಟವರಿಗೆ ದರಖಾಸ್ತು ಮೂಲಕ ಮಂಜೂರು ಮಾಡಲು ಸರ್ಕಾರವು ಅನುಮತಿ ನೀಡುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಪರಿಶೀಲಿಸಲಾಗುವುದು.

ಸರಕಾರಿ ಅಕ್ರಮ ಭೂಮಿ ಸಾಗುವಳಿ ವಶಾಡಿರುವ ಬಗ್ಗೆ

೧೩೩೭ (೨೧೫೮) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಸರ್ಕಾರಿ ಭೂಮಿ ಅಕ್ರಮ ಮಾಡಿಕೊಂಡಿರುವ ಸಾಗುವಳಿದಾರರಿಗೆ ಸರ್ಕಾರ ಸಾವಿರಗಟ್ಟಲೆ ದಂಡ ವಿಧಿಸಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ದಿಸೆಯಲ್ಲಿ ಅನೇಕ ಸಾಗುವಳಿದಾರರು ಸಾವಿರ ರೂಪಾಯಿ ದಂಡವನ್ನು ಸರ್ಕಾರಿ ಖಜಾನೆಗೆ ತುಂಬಿದರೂ ಇನ್ನೂ 'ಡಿ' ನೋಟೀಸು ನೀಡದಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ?